ಸಿ.ಸಿ. ನಂ. 12078-2006
ಪಿಡಬ್ಲ್ಯೂ-12

<u>ಸಾಕ್ಷಿಯನ್ನು ದಿನಾಂಕಃ 09-12-2025 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.</u>
<u>ಮುಂದುವರಿದ ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ</u>

ಬ್ಯಾಂಕ್ ಆಫ್ ಬರೋಡಾದಿಂದ ನಿಪಿ.281 ರಿಂದ 283 ರ ದಾಖಲೆಗಳನ್ನು ಪಡೆದಿರುತ್ತೇನೆ. ನಿಪಿ. 281 ಬ್ಯಾಂಕಿನ ಕವರಿಂಗ್ ಲೇಟರ್ ಆಗಿರುತ್ತದೆ. ನಿಪಿ.282 ಮತ್ತು 284 ರ ದಾಖಲೆಗಳನ್ನು ಅಮಾನತ್ತ ಕೋ-ಆಪರೇಟಿವ್ ಬ್ಯಾಂಕ್ ನಿಂದ ಪಡೆದಿರುತ್ತೇನೆ. ಈ ದಾಖಲೆಯನ್ನು ಸ್ವಯಂ ತಂದು ಕೊಟ್ಟಿರುತ್ತಾರೆ. ನಿಪಿ.282 ನ್ನು ಮಹಜರ್ ಮಾಡುವಾಗ ಬ್ಯಾಂಕ್ ನಿಂದ ಪಡೆದಿರುತ್ತೇನೆ.

ಅಮಾನತ್ತ ಕೋ-ಆಪರೇಟಿವ್ ಸೊಸೈಟಿಯನ್ನು ಬೋರ್ಡ ಆಫ್ ಡೈರೆಕ್ಟರ್ ಪ್ರಾರಂಭ ಮಾಡಿದ್ದರು. ಚಾಸಾ 53 ರವರು ಬೋರ್ಡ ಆಫ್ ಡೆರೆಕ್ಟರ್ ಆಗಿದ್ದರು. ಅದು ಯಾವಾಗ ಪ್ರಾರಂಭ ಆಯಿತು, ಅದರ ದಿನಾಂಕ ಗೊತ್ತಿಲ್ಲ. ಸಾಕ್ಷಿಗೆ ಜೆರಾಕ್ಸ ದಾಖಲೆಯನ್ನು ಕೊಟ್ಟಾಗ ಅದು ಜೆರಾಕ್ಸ ಎಂದು ಹೇಳಿರುತ್ತಾರೆ. ಈ ಸೊಸೈಟಿ ಪ್ರಾರಂಭ ಆಗುತ್ತಿರುವ ಬಗ್ಗೆ ತನಿಖೆಯಡಿಯಲ್ಲಿ ಗೊತ್ತಾಯಿತು. ಸದರಿ ಸೊಸೈಟಿ ಯಾವ ಯಾವ ಸ್ವತ್ತುಗಳನ್ನು ಹೊಂದಿದೆ ಎಂದು ಗೊತ್ತಾ ಎಂದರೆ ಸಾಕ್ಷಿಯು ಸ್ವಲ್ಪ ಹಣ ಪ್ರಾರ್ಪಟಿ ಖರೀದಿ ಮಾಡಲು ಡೈವರ್ಟ ಆಗಿತ್ತು ಎಂದು ನುಡಿಯುತ್ತರೆ. ಯಾರ ಹೆಸರಿನಲ್ಲಿ ಪಹಣಿ ಇದ್ದರೇ ಅವರೇ ಮಾಲೀಕರು ಎಂದರೆ ಸರಿ.

ಯಾರಿಂದ ಲ್ಯಾಂಡ್ ಖರೀದಿ ಮಾಡಿದ್ದರು ಎಂದು ಗೊತ್ತಾ ಎಂದರೆ ಸಾಕ್ಷಿಯು ಹಣ ವರ್ಗಾವಣೆಯಾಗಿತ್ತು ಎಂದು ನುಡಿಯುತ್ತಾರೆ. ಯಾವುದೇ ಕರಾರು ಆಗಿಲ್ಲ. ಹಣ ವರ್ಗಾವಣೆ ಮಾಡಿದ್ದ ಬಗ್ಗೆ ಸ್ಟೇಟ್‌ಮೆಂಟ್ ಇದೆಯೇ ಎಂದರೆ ಡಿಡಿ ಮೂಲಕ ಹೋಗಿರುತ್ತದೆ ಎಂದು ನುಡಿಯುತ್ತಾರೆ. ತನಿಖೆಯಲ್ಲಿ ಡಿಡಿಯನ್ನು ಪಡೆದು ಹಾಕಿರುತ್ತಾರೆ ನಾನು ಹಾಕಿಲ್ಲ.

<u>ಮರುವಿಚಾರಣೆಃ ಇಲ್ಲ</u>

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ